ಶ್ರೀ ಬಿ. ಬೈರಪ್ಪಾಜಿ.—ದೇಶಾದ್ಯಂತ ಇರತಕ್ಕ ತಾಲ್ಲೂಕು ಅಗ್ರಿಕರ್‌ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಇಂತಹ ನಣ್ಣಪುಟ್ಟ ವ್ಯವಹಾರಗಳನ್ನು ಮಾಡುತ್ತಿದ್ದಾರೆ. ಆದರೆ ಈ ತುಮಕೂರು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದಿಂದ ಅನೇಕ ರೀತಿಯ ಲೋಪ ದೋಷಗಳು ಇನ್ನೂ ನಡೆಯುತ್ತಲೇ ಇವೆ. ಈ ಮಾನ್ಯ ಸಭೆಯಲ್ಲೂ ಕೂಡ ಅನೇಕ ಸಾರಿ ಆ ಬಗ್ಗೆ ದೂರುಗಳು ಬಂದಿವೆ.....

Mr. SPEAKER.—It must relate to camphor or clove or somethnig connected with question but it is a general question.

ಶ್ರೀ ಬಿ. ಬೈರಪ್ಪಾಜಿ.—ಇನ್ನು ಮುಂದಾದರೂ ಇಂತಹ ಸೊಸೈಟಿಗಳಲ್ಲಿ ದುರುಪಯೋಗ ವಾಗುವ ಸಂದರ್ಭಗಳನ್ನು ಸರ್ಕಾರದವರು ತಪ್ಪಿಸುವುದಕ್ಕೆ ಪ್ರಯತ್ನಪಟ್ಟ ಜನಗಳಲ್ಲಿ ಸಹಕಾರ ಸಂಘಗಳಲ್ಲಿ ನಂಬಿಕೆ ಬರುವಂತೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ?

Mr. SPEAKER.—It is a hypothetical question.

ಶ್ರೀ ಎನ್. ನಂಜೇ ಗೌಡ.—ಸ್ಪೇಟ್ ಮಾರ್ಕೆಟಿಂಗ್ ಸೊಸೈಟಿಗಳಿಗೆ ಇಂಡೆಂಟ್ ಮಾಡಿದರೆ ಆ ಪದಾರ್ಥಗಳನ್ನು ಕೊಡುತ್ತಾರೆಂದು ಮಾನ್ಯ ಮಂತ್ರಿಗಳು ಹೇಳಿದರು. ಏನೇನು ಸಾಮಾನುಗಳು ಅಲ್ಲರುತ್ತದೆಂಬುದಕ್ಕೆ ತಾಲ್ಲೂಕು ಸೊಸೈಟಿಗಳಿಗೆ ಒಂದು ಪಟ್ಟಿಯನ್ನು ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ಪೇಟ್ ಮಾರ್ಕೆಟಿಂಗ್ ಸೊಸೈಟಿಗೆ ಏನೇನು ಪದಾರ್ಥಗಳು ಬರುತ್ತವೆಂಬುದನ್ನು ಸಾಮಾನ್ಯವಾಗಿ ವ್ಯಾಪಾರ ಮಾಡುವವರು ತಿಳಿದುಕೊಂಡೇ ಇಂಡೆಂಟ್ ಮಾಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಇಲ್ಲ, ಅದು ಯಾರಿಗೂ ಗೊತ್ತಿಲ್ಲ. ಇನ್ನು 3-4 ವರ್ಷಗಳಾದ ಮೇಲೆ ಬಹುಶಃ ಉಪಮಂತ್ರಿಗಳಿಗೂ ಕೂಡ ಅದು ಗೊತ್ತಾಗುವುದಿಲ್ಲ.

Mr. SPEAKER.—I was telling Sri Nanje Gowda that his supplementary was too far away from the main question.

Sri RAMAKRISHNA HEGDE.—The Hon'ble Member is at liberty to become a member and then a director if he is qualified and then subsequently the Chairman of the State Marketing Society.

Bennithure Project in Gulbarga District.

*Q.—570. Sri MAHANTASWAMY (Shahpur).—

Will the Government be pleased to state :—

(*a*) why the Bennithure Project in Gulbarga District has been dropped ;

(*b*) the estimated cost of the same ;

(*c*) when they would take up this project ?

A.—Sri S. NIJALINGAPPA (Chief Minister).—

(*a*) It has been dropped and is under detailed investigation.

(*b*) The cost will be known after the investigation is over.

(*c*) Does not arise for the present.

†ಶ್ರೀ ಎಸ್. ನಿಜಲಿಂಗಪ್ಪ.—(ಎ) ಉತ್ತರದಲ್ಲಿ ಒಂದು ತಪ್ಪಾಗಿದೆ. It has been dropped ಎಂದು ಇದೆ. It has not been dropped ಎಂದು ಓದಿಕೊಳ್ಳಬೇಕು.

† Indicates that the remarks or speeches have not been revised by the member concerned

ಶ್ರೀ ಮಹಂತಸ್ವಾಮಿ.—(ಅ)ಗೆ ಉತ್ತರವಾಗಿ ಈ ಯೋಜನೆಯನ್ನು ಕೈಬಿಟ್ಟಿರುವುದಿಲ್ಲ, ಅದರ ಬಗ್ಗೆ ವಿವರವಾದ ಪರಿಶೀಲನೆಯನ್ನು ನಡೆಸಲಾಗುತ್ತದೆ. ಆ ವಿವರಣೆ ಪರಿಶೀಲನೆ ಯಾವ ಹಂತದಲ್ಲಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಯೋಜನೆ 59ನೇ ಇಸವಿಯಲ್ಲಿ ತಯಾರಾಯಿತು. ಈ ಯೋಜನೆಗೆ ಜಾಗ ಸರಿಯಾಗಿಲ್ಲವೆಂದು ಹೇಳಿ ಸರ್ಕಾರದವರು ಬೇರೆ ಜಾಗದಲ್ಲಿ ಈ ಯೋಜನೆಯನ್ನು ಕೂಲಂಕಷವಾಗಿ ಮಾಡುವುದಕ್ಕೆ ಸಾಧ್ಯವೇ ಎಂಬುದಾಗಿ ವಿಚಾರ ಮಾಡಿದರು. ಈಗ 3 ಕಡೆಗಳಲ್ಲಿ ಜಾಗವನ್ನು ಚುನಾಯಿಸಿ ಮಾಡುತ್ತಿದ್ದಾರೆ. ಒಂದು ಲಿಂಗಪಾಡಿ, ಇನ್ನೊಂದು ಕನಸವಾಡಿ, ಮತ್ತೊಂದು ದಸ್ಕೂರ್—ಇವುಗಳ ಹತ್ತಿರ ವಿಚಾರ ಮಾಡುತ್ತಿದ್ದಾರೆ.

ಶ್ರೀ ಮಹಂತಸ್ವಾಮಿ.—ಮಹಾಗಾವ್ ಹತ್ತಿರ ಈ ಯೋಜನೆಗಾಗಿ ಕೈಗೊಂಡಿರತಕ್ಕ ನಿವೇಶನವನ್ನು ಬದಲಾಯಿಸಿದುದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಆಗ ಅದು ಸೂಕ್ತವಾದ ಸ್ಥಳವಲ್ಲವೆಂದು ಹೇಳಿದ್ದರಿಂದ ಬೇರೆ ಕಡೆಗಳಲ್ಲಿ ಸರ್ಕಾರದವರು ನೋಡುತ್ತಿದ್ದಾರೆ.

ಶ್ರೀ ಮಹಂತಸ್ವಾಮಿ.— ಮೊದಲಿನ ಸೂಕ್ತ ಸ್ಥಳವನ್ನು ಎಲ್ಲಾ ಟೆಕ್ನಿಷಿಯನ್ಸ್ ಕೂಡ ಸೇರಿ ಸೆಲೆಕ್ಟ್ ಮಾಡಿದ್ದಾರಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದೂ ಇದರಲ್ಲಿದೆ. ತಜ್ಞರಲ್ಲಿ ಒಬ್ಬರಿಗಿಂತ ಇನ್ನೊಬ್ಬರು ಬುದ್ಧಿವಂತರು ಬಂದರೆ ಆ ರೀತಿ ಮಾಡಬೇಕಾಗುತ್ತದೆ.

ಶ್ರೀ ಗೋಪಾಲರಾವ್ ಮೂಡಬಿ.—ಸಂಗೊಳಿಗಿ ಮತ್ತು ಲಿಂಗವಾಡಿ ಜಾಗಗಳಲ್ಲಿ ಈ ಯೋಜನೆ ಮಾಡಿದರೆ ಅಂದಾಜು ವೆಚ್ಚವೆಷ್ಟು, ಮತ್ತು ಅಚ್‌ಕಟ್ ಎಷ್ಟು ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಸರ್ಕಾರದವರು ಮೂರು ಜಾಗಗಳಲ್ಲಿ ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಅದಾದ ಮೇಲೆ ಗೊತ್ತಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಣತೂರು ಯೋಜನೆಯನ್ನು ಮಹಾಗಾವಿನ ಹತ್ತಿರ ಕೈಗೊಳ್ಳಬೇಕು ಎಂದು ಹಿಂದೆ ನಿರ್ಧಾರ ಮಾಡಿತ್ತು. ಆಮೇಲೆ ಆ ಯೋಜನೆಯನ್ನು ಅಲ್ಲಯೇ ಕೈಗೊಳ್ಳುವುದರಿಂದ ಮಹಗಾವ್ ಗ್ರಾಮವೇ ಮುಳುಗಡೆಯಾಗುತ್ತದೆ ಮತ್ತು ಅದರಿಂದ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತದೆ. ಏನಾದರೂ ಆ ಸ್ಥಳವನ್ನು ಬದಲಾಯಿಸಬೇಕು ಎಂದು ಸರ್ಕಾರದ ನಿಲುವು ಇದೆಯೇ ?

†ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಇನ್ನೂ ತೀರ್ಮಾನ ಮಾಡಿಲ್ಲ. ಆ ಬಗ್ಗೆ ಏನೇನೊ ಹೇಳಿಕೆಗಳು ಮತ್ತು ಪುಕಾರುಗಳು ಬರುತ್ತಿವೆ. ಆದ್ದರಿಂದ ಆ ಬಗ್ಗೆ ಮುಂದೆ ಏನು ಮಾಡಬೇಕೆಂದು ನಾವು ಇನ್ನೂ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಸಿದ್ಧಯ್ಯ ಕಾಶೀಮಠ.—ಬೆಣತೂರು ಯೋಜನೆ ಬಹಳ ಮುಖ್ಯವಾದ ಯೋಜನೆಯಾಗಿರುವುದರಿಂದ ಅದನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮುಗಿಸುವ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇನ್‌ವೆಸ್ಟಿಗೇಷನ್ ಆಗದ ಹೊರತು ಆ ವಿಷಯದಲ್ಲಿ ನಾವು ಏನೂ ಹೇಳುವುದಕ್ಕಾಗುವುದಿಲ್ಲ. ಸರಿಯಾಗಿ ಇನ್‌ವೆಸ್ಟಿಗೇಷನ್ ಆಗಬೆ ಎಸ್ಟಿಮೇಟುಗಳನ್ನು ಮಾಡುವುದಾದರೆ ಎರಡು ಮೂರು ಎಸ್ಟಿಮೇಟುಗಳನ್ನು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಅದನ್ನು ನಾವು ಕೂಲಂಕಷವಾಗಿ ಪರಿಶೀಲನೆ ಮಾಡಿ ಅದು ಆಗತಕ್ಕದ್ದು ಸೂಕ್ತವೇ ಹೇಗೆ ಎಂಬುದನ್ನು ನೋಡಿ ಮಾಡಬೇಕಾಗುತ್ತದೆ. ಆದ್ದರಿಂದ ಅದು ಇನ್‌ವೆಸ್ಟಿಗೇಷನ್ ಆಗದ ಹೊರತು ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ತರಣಪ್ಪ.—ಅದನ್ನು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಎಷ್ಟು ಕಾಲ ಹಿಡಿಯಬಹುದು ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಹಾಗಾವಿನ ಹತ್ತಿರ ಈ ಯೋಜನೆ ತೆಗೆದುಕೊಳ್ಳುವುದರಿಂದ ಎಷ್ಟು ಎಕರೆ ಅಚ್‌ಕಟ್ ಆಗುತ್ತದೆಯೋ ಅಷ್ಟು ಎಕರೆ ಅಚ್‌ಕಟ್ ಎರಡನೆಯ ಸ್ಥಳದಲ್ಲಿ ಆ ಯೋಜನೆಯನ್ನು ತೆಗೆದುಕೊಂಡರೆ ಬರುವುದಿಲ್ಲ ಅಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಅದನ್ನು ಹೇಳುವುಕ್ಕಾಗುವುದಿಲ್ಲ. ಇನ್‌ವೆಸ್ಟಿಗೇಷನ್ ಪೂರ್ತಿ ಆದಮೇಲೆ ಅದನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಗೋವಾಲರಾವ್ ಮುಡಬ.—ಈ ಬೆಣತ್ತೂರು ಪ್ರಾಜೆಕ್ಟ್ ಏನಿದೆ ಇದು ಗುಲ್ಬರ್ಗ ಸಿಟಿಗೆ 4 ಮೈಲಿ ದೂರದಲ್ಲಿದೆ. ಈ ಪ್ರಾಜೆಕ್ಟ್‌ನ್ನು ಕಟ್ಟುವುದರಿಂದ ಗುಲ್ಬರ್ಗ ಸಿಟಿಗೆ ವಾಟರ್ ಸಪ್ಲೈ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಇದು ಬಹಳ ಮಹತ್ವವಾದ್ದಾಗಿದೆ. ಆದ್ದರಿಂದ ಈ ಕೆಲಸವನ್ನು ಅದಷ್ಟು ತೀವ್ರವಾಗಿ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ವಿಚಾರ ಮಾಡಬೇಕು.

Minor Irrigation and Lift Irrigation Schemes sanctioned in Mangalore Taluk.

*Q.—600. Sri SANJEEVANATH AIKALA (Suratkal).—

Will the Government be pleased to state :—

(*a*) which are the Minor Irrigation and Lift Irrigation Schemes sanctioned to be executed during the years 1964-65 and 1965-66 in Mangalore Taluk, South Kanara District ;

(*b*) what is the total estimated cost of these schemes executed in the year 1964-65 and to be executed in the year 1965-66 ;

(*c*) what is the total amount spent on the schemes executed in the year 1964-65 ;

(*d*) which are the Minor Irrigation and Lift Irrigation schemes surveyed but remain pending execution for want of (i) Estimation, (ii) Technical approval, (iii) Administrative approval, (iv) financial sanction and (v) agency to take up the work in the above Taluk ?

A.—Sri ALUR HANUMANTHAPPA (Deputy Minister for Minor Irrigation). —

(*a*) For 1964-65—*Vide* Statement I appended.

For 1965-66—*Vide* Statement II appended.

These works will be considered for sanction subject to availability of funds.

(*b*) The total estimated cost of the works executed in the year 1964-65 is Rs. 22,30,000 and the total cost proposed to be executed during 1965-66 is Rs. 13,37,000 if grants are available.

(*c*) Rs. 2,76,506 upto end of January, 1965.

(*d*) *Vide* Statement II appended.